# 1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು.

ಸಿಸಿ ನಂ.845/2017

ದಿಃ 23.07.2019 ರಂದು ಪ್ರಮಾಣೀಕರಿಸಲಾಯಿತು.

ಪ್ರಾಸಾಃ 2

ಚಾಸಾಃ 2

| | |
|---|---|
| ಹೆಸರು | ಃ ಕುಮಾರ್.ವಿ.ಎನ್. |
| ತಂದೆಯ ಹೆಸರು | ಃ ನಂಜುಂಡಪ್ಪ |
| ವಯಸ್ಸು | ಃ 49 ವರ್ಷ |
| ಉದ್ಯೋಗ | ಃ ಪ್ರೊಡಕ್ಷನ್ ಮ್ಯಾನೇಜರ್, ನೋಬಲ್ ಸಾಫ್ಟ್‌ವೇರ್ ಸಿಸ್ಟಮ್ಸ್ ಪ್ರೈವೇಟ್ ಲಿ. ಕಂಪನಿ |
| ವಾಸ | ಃ ಬೆಂಗಳೂರು. |

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ನೋಬಲ್ ಸಾಫ್ಟ್‌ವೇರ್ ಸಿಸ್ಟಮ್ಸ್ ಪ್ರೈವೇಟ್ ಲಿ. ಕಂಪನಿಯಲ್ಲಿ ಪ್ರೊಡಕ್ಷನ್ ಮ್ಯಾನೇಜರ್ ಎಂದು ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ಪ್ರಾಸಾ.1ರವರು ನಮ್ಮ ಕಂಪನಿಯಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ. ನನಗೆ ಆರೋಪಿಗಳು ಗೊತ್ತು, ಆರೋಪಿಗಳು ನಮ್ಮ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಆರೋಪಿಗಳು ಕೆಲಸ ಮಾಡುವ ಸಮಯದಲ್ಲಿ ನಾನು ಸಹ ನಮ್ಮ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ. ನಮ್ಮ ಕಂಪನಿಯಲ್ಲಿ ಪೊಲೀಸ್‌ನವರು ಬಂದು ಮಹಜರ್ ಮಾಡಿರುತ್ತಾರೆ. ಆ ಸಮಯದಲ್ಲಿ ನಾನು ಹಾಜರಿದ್ದೆ. ಸದರಿ ಮಹಜರ್‌ನ್ನು ಈಗಾಗಲೇ ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ನಾನು ಪೊಲೀಸ್‌ನವರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

**(ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ- ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ದಿಃ 08.12.2016 ರಂದು ಪೊಲೀಸ್‌ನವರಿಗೆ ಆರೋಪಿಗಳು ನಮ್ಮ ಕಂಪನಿಯ………………………………………………………. ಎಂದು ಹೇಳಿಕೆಯನು ಕೊಟ್ಟಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯು ಒಪ್ಪದ ಹೇಳಿಕೆಯನ್ನು ನಿಪಿ.3 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನೀಡುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಪಾಟೀ ಸವಾಲುಃ ಕೋರಿಕೆಯ ಮೇರೆಗೆ ಪಾಟಿ ಸವಾಲಿಗೆಂದು ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇ.

1ನೇ ಅ. ಮು. ಮ. ದಂ. ನ್ಯಾಯಾಲಯ